ಊ) ಸದರಿ ಸ್ಥಳದಲ್ಲಿ ಒಬ್ಬ ವೈದ್ಯಾಧಿಕಾರಿಯನ್ನು ತುಂಬಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?

ಊ) ಬೆಳಗಾಂನಲ್ಲಿರುವ ಜಿಲ್ಲಾ ವೈದ್ಯಾಧಿಕಾರಿಯವರ ಬಳಿ ಹೆಚ್ಚಿಗೆ ಇರುವವರ ಪೈಕಿ ಒಬ್ಬರನ್ನು ಓ.ಓ.ಡಿ. ಮೇಲೆ ಇಲ್ಲಿ ಪೋಸ್ಟಿಂಗ್ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು):–

ಅ) ನಿಜ

ಆ) ದಿನಾಂಕ 21–8–88ರಂದು ವಿಭಾಗೀಯ ಸಹ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಳಗಾವಿ ಇವರು ಹೊರಡಿಸಿದ್ದಾರೆ.

ಇ) ನಿಜ. ಸ್ವಲ್ಪ ಕಾಲದವರೆಗೆ ಕಾರ್ಯ ನಿರ್ವಹಿಸಿದ್ದಾರೆ.

ಈ) ಬಂದಿದೆ.

ಉ) ಸದರೀ ಸ್ಥಳಕ್ಕೆ ಒಬ್ಬ ವೈದ್ಯರ ಹುದ್ದೆಯನ್ನು ಮಂಜೂರು ಮಾಡಿ ಹುದ್ದೆ ತುಂಬುವ ಕುರಿತು ಪರಿಗಣಿಸಲಾಗುವುದು.

ಊ) ಪರಿಶೀಲನೆಯಲ್ಲಿದೆ.

ಬ್ಲಡ್ ಬ್ಯಾಂಕ್ ಬಗ್ಗೆ ಡಾ। ಕೃಷ್ಣಭಾರ್ಗವ ನೇತೃತ್ವದ ಸಮಿತಿಯು ನೀಡಿದ್ದು, ವರದಿಯನ್ನು ಕಾರ್ಯಗತಗೊಳಿಸುವುದು

556. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಕ್ತ ನಿಧಿಗಳ ಬಗ್ಗೆ ಡಾ। ಕೃಷ್ಣಭಾರ್ಗವ ನೇತೃತ್ವದ ಸಮಿತಿಯು ತನ್ನ ವರದಿಯನ್ನು ಎಂದು ಸರ್ಕಾರಕ್ಕೆ ನೀಡಿತು.

ಆ) ಈ ವರದಿಯ ಮುಖ್ಯಾಂಶಗಳೇನು?

ಇ) ಹಾಗಿದ್ದಲ್ಲಿ ಈ ವರದಿಯನ್ನು ಜಾರಿಗೊಳಿಸಲು ಸರ್ಕಾರ ಇದುವರೆವಿಗೆ ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯವರು):–

ಅ) 18–09–1989

ಆ) ರಕ್ತನಿಧಿ ಕೇಂದ್ರಗಳನ್ನು ಸಮರ್ಪಕವಾಗಿ ಹಾಗೂ ವ್ಯವಸ್ಥಿತ ಹತೋಟಿಯಲ್ಲಿ ತರಲು ಸಮಿತಿಯು ಶಿಫಾರಸ್ಸು ಮಾಡಿದೆ. ಇದಲ್ಲದ ಆರೋಗ್ಯದಾಯಕವಾದ ರಕ್ತವನ್ನು ಅರ್ಹದಾನಿಗಳಿಂದಲೇ ಶೇಖರಿಸುವುದನ್ನು ಖಾತರಿಪಡಿಸಿಕೊಳ್ಳುವ ಬಗ್ಗೆ ಮತ್ತು ರಕ್ತ ನಿಧಿ ಕೇಂದ್ರಗಳಲ್ಲಿ ಇರಬೇಕಾದ ಕನಿಷ್ಟ ಸೌಲಭ್ಯಗಳ ಬಗ್ಗೆ ಸಹಾ ಶಿಫಾರಸ್ಸು ನೀಡಿದೆ.

ಇ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರ ನೇತೃತ್ವದಲ್ಲಿ ಒಂದು ಉಪ ಸಮಿತಿಯನ್ನು ರಚಿಸಲಾಗಿದ್ದು, ಡಾ। ಭಾರ್ಗವ ಸಮಿತಿ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಮಾರ್ಗದರ್ಶನಗಳನ್ನು ರಚಿಸಲು ಸೂಚಿಸಲಾಗಿದೆ. ಸದರಿ ಸಮಿತಿಯು ವರದಿಯನ್ನು ಸದ್ಯದಲ್ಲೇ ಸಲ್ಲಿಸುವ ನಿರೀಕ್ಷೆ ಇದೆ.